made use of in Analytical Chemistry than in metallurgy ?

Sri VEERENDRA PATIL.—It is a matter of opinion. He is equally qualified both in Metallurgy and Mining.

Sri U. S. NAYAK.—Will the Government place his services at the disposal of the mine owners, especially when the mine owners are facing a crisis ?

Sri VEERENDRA PATIL.—We have got sufficient work in our department and in the Laboratory. Therefore we cannot spare the services of that officer to private mine owners.

Sri C. K. RAJAIAH SETTY.—Is it a fact that this officer was invited to Bhilai Steel Factory ?

Sri VEERENDRA PATIL.—I do not know those details.

Promotion of Personnel of the Local Administration of the Integrated Madras area.

Q.—2798. Sri M. M. J. SADYOJATHAPPIAH (Kottur).—

Will the Government be pleased to state :—

(*a*) whether they are aware that the application of Mysore Rules in the matter of promoting the personnel of the Local Administration of the integrated districts of the old composite Madras State has resulted in the tragic stagnation of these officers, who having passed Departmental Tests under the old Madras Rules are qualified and eligible for promotion :

(*b*) whether they are also aware that the Department of Local Administration in the old Madras set-up is an exclusive unit for recruitment and promotions ?

A.—Sri R. CHENNIGARAMIAH (Minister for Local Self-Government).—

(*a*) No.

(*b*) Yes.

ಶ್ರೀ ಎಂ. ಎಂ. ಜೆ. ಸದ್ಯೋಜಾತಪ್ಪಯ್ಯ.—ಬಳ್ಳಾರಿಜಿಲ್ಲೆಯಲ್ಲಿ ಸ್ಥಳಿಯ ಸಂಸ್ಥೆಗಳ ಆಡಳಿತಕ್ಕೆ ಸಂಬಂಧಪಟ್ಟ ಎಷ್ಟು ಜನಕ್ಕೆ ಬಡ್ತಿಕೊಟ್ಟಿದ್ದೀರಿ ?

*ಶ್ರೀ ಆರ್. ಚೆನ್ನಿಗರಾಮಯ್ಯ.—ನೋಟೀಸ್.

Construction of Right Bank Channel from Boranakanive Tank, Chickanaikanahalli Taluk.

Q.—2839. Sri C. K. RAJAIAH SETTY (Chickanaikanahalli).—

Will the Government be pleased to state :—

(*a*) the capacity of Boranakanive tank, Chickanaikanahalli taluk ;

(*b*) the atchkat under cultivation in left bank channel ;

(*c*) whether there is any proposal to undertake construction of right bank channel also ;

(*d*) if so, the extent that can be irrigated under the right bank channel ;

(*e*) whether there is any representation by public of nearby villages urging for the right bank channel ?

A.—Sri H. K. VEERANNA GOWDH (Minister for Public Works).—

(*a*) 8,352 Units.

(*b*) About 1,241 Acres.

(*c*) No.

(*d*) Does not arise in view of reply to clause (*c*).

(*e*) Yes.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ಈ ಕೆರೆಯ ಕ್ಯಪ್ಯಾಸಿಟಿ 8,352 ಯುನಿಟ್ ಎಂದು ಉತ್ತರದಲ್ಲಿ ಹೇಳಿದೆ. ಸುಮಾರು 1,241 ಎಕರೆ ಗಳಷ್ಟು ಭೂಮಿ ಸಾಗುವಳಿಯಾಗುತ್ತದೆಂದೂ ಹೇಳಿದೆ. ಹಾಗಾದರೆ ಇನ್ನೊಂದು ಚಾನೆಲ್ ತೆಗೆಯು ವುದಕ್ಕೆ ಅವಕಾಶವಿದೆಯೇ ?

*ಶ್ರೀ ಎಚ್. ಕೆ. ವೀರಣ್ಣಗೌಡ.—8,352 ಯುನಿಟ್ ಕ್ಯಪ್ಯಾಸಿಟಿ ಇದೆ. 1,672 ಎಕರೆ ತರಿ ಆಗ ಬೇಕಾಗಿತ್ತು ಆದರೆ 1,241 ಎಕರೆ ಅಷ್ಟೇ ಸಾಗುವಳಿ ಆಗುತ್ತಾ ಇದೆ. ಎಷ್ಟು ನೀರು ಬೇಕೋ ಅಷ್ಟು ನೀರು ಬರುತ್ತಿಲ್ಲ ಎಂಬುದು ಗೊತ್ತಿರುವಾಗ ಇನ್ನೊಂದು ಚಾನೆಲ್ ತೆಗೆಯುವುದು ಹೇಗೆ ? ಈ ಕೆರೆ ಮೂರು ಸಾರಿ discharge ಆಗಿದೆ. ಆದರಿಂದ left bank channel ಇನ್ನೂ ಪೂರ್ತಿಯಾಗಿ ಉಪಯೋಗಿಸಿ ಕೊಳ್ಳಲಿಲ್ಲ. ಹತ್ತು ಮೈಲಿ ಆಚೆಗೆ ಎಡದಂಡೆಯ ಕಾಲುವೆಯ ಮಾರ್ಗದಲ್ಲಿ ಬೇಕಾದಷ್ಟು ಮರಗಳು ಬೆಳೆದಿದ್ದನ್ನು ನಿವಾರಿಸಬೇಕಾಗಿದೆ. ನೀರು ಅಷ್ಟು ಸಾಕಾಗುತ್ತಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಮೇಲ್ಗಡೆ ಎಷ್ಟು ಕೆರೆಗಳು ಇವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೂರಾರು ಕೆರೆ ಗಳು ಇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ಕೆರೆಯಲ್ಲಿ ಹೂಳು ತುಂಬಿಕೊಂಡು ನೀರು ಹಿಡಿಯುವ ಅವಕಾಶ ಕಡಮೆಯಾಗಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೋದ ವರ್ಷ ಈ ಕೆರೆ discharge ಆದುದಕ್ಕೆ ಅದೇ ಕಾರಣವೆಂದು ಹೇಳುತ್ತಾರೆ ಮೂರು ಸಾರಿ discharge ಆಗಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಕಳೆದ ಹತ್ತು ವರ್ಷಗಳಲ್ಲಿ ಎರಡು ಸಾರಿ discharge ಆಗಿದೆಯಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೂರು ಸಾರಿ ಆಗಿದೆ, ನಾನು ನೋಡಿಕೊಂಡು ಬಂದಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸಿಲ್ಟ್ ಅಪ್ ಆದುದನ್ನು ತೆಗೆಯಿಸಿ ಇನ್ನೊಂದು ಚಾನೆಲ್ open ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಲೆಫ್ಟ್ ಬ್ಯಾಂಕ್ ಚಾನೆಲ್‌ಗೆ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡು ಆಮೇಲೆ ಯೋಚನೆ ಮಾಡಬಹುದು. ಇನ್ನೂ ಪೂರ್ತಿಯಾಗಿ ಉಪಯೋಗ ಮಾಡಿಕೊಳ್ಳಲು ಆಗಲಿಲ್ಲ. ಲೆಫ್ಟ್ ಬ್ಯಾಂಕ್ ಚಾನೆಲ್ ಪ್ರದೇಶದಲ್ಲಿಯ ಮರಗಳನ್ನು ತೆಗೆಸಿ ಆ ಪ್ರದೇಶಕ್ಕೆಲ್ಲ ನೀರು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಲೆಫ್ಟ್ ಬ್ಯಾಂಕ್ ಚಾನೆಲ್ ಭೂಮಿಯಲ್ಲಿ ಬಂಡೆಗಳು ಇರುವುದರಿಂದ ಸಾಗುವಳಿಗೆ ಭೂಮಿಯು ಲಾಯಖ್ ಇಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಾಗುವಳಿಗೆ ಲಾಯಖ್ ಇಲ್ಲ ಎಂದು ಅಲ್ಲ. ಟೆಕ್ನಿಕಲ್ ಪಾಯಿಂಟ್ ಏನಾದರೂ ಇದ್ದರೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪ್ರತಿವರ್ಷ ಐದು ಸಾವಿರ ಯುನಿಟ್‌ನ ಮೇಲೆ ಕೆರೆಯಲ್ಲಿ ನೀರು ನಿಲ್ಲುವುದಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಜ್ಞಾಪಕವಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅಧಿಕಾರಿಗಳು ವ್ಯವಸಾಯಕ್ಕೆ ಸಾಕಷ್ಟು ನೀರು ಒದಗಿಸಿಲ್ಲ ಅಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೀರು ಒದಗಿಸಿಲ್ಲವೆಂದು ಅಲ್ಲ, ಈ ಅಚ್ಚುಕಟ್ಟಿನಲ್ಲಿ ದೊಡ್ಡ ದೊಡ್ಡ ಮರಗಳು ಬೆಳೆದಿವೆ. ಚಾನೆಲ್ ರಿಪೇರಿ ಮಾಡಬೇಕಾಗಿದೆ. ನೀರು ಹೆಚ್ಚಾದರೆ ಮುಂದೆ ರೈಟ್ ಬ್ಯಾಂಕ್ ಚಾನೆಲ್ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನೀರು ಸರಿಯಾಗಿ ಒದಗಿಸುತ್ತಿಲ್ಲ ಎಂದು ರೈತರು ಹೇಳುತ್ತಾರೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಚಾನೆಲ್ ಸರಿಯಾಗಿಲ್ಲ ಎಂದು ನಾನು ಹೇಳಿದ್ದೇನೆ. ಕೆರೆಯಲ್ಲಿ ಸಾಕಷ್ಟು ನೀರು ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಚೆಗೆ ಎರಡು ವರುಷಗಳಿಂದ ಸುಮಾರು 1,300 ಎಕರೆ ಸಾಗುವಳಿಯಾಗುತ್ತಾ ಇದೆ. ಇನ್ನು ಹೆಚ್ಚು ಮುತವರ್ಜಿ ವಹಿಸಿ 1,672 ಎಕರೆ ಮೇಲ್ಪಟ್ಟು ಅಚ್ಚುಕಟ್ಟಿಗೆ ನಾಲಾ ನೀರು ಉಪಯೋಗ ಮಾಡಿಕೊಳ್ಳಲು ಬರುವ ಹಾಗೆ ಮಾಡಬೇಕಾಗಿದೆ. ಆಮೇಲೆ ಬಲಗಡೆಯ ನಾಲಾ ವಿಚಾರ ಮಾಡಲಾಗುವುದು.

Sri C. J. MUCKANNAPPA.—When water can be fed from the Borana-kanive Tank, why do you want to construct another tank spending about more than Rs. 3 lakhs under this very tank ?

Sri H. K. VEERANNA GOWDH.—The best answer I can give to my friend is to request him to put a fresh question on this subject and I will answer it.

ಶ್ರೀ ಜಿ. ಎನ್. ಪುಟ್ಟಣ್ಣ.—Supplementary to (e) : ಎಷ್ಟು ವರ್ಷಗಳಿಂದ ಈ ರೀತಿ ಜನರಿಂದ ಮನವಿಗಳು ಬರುತ್ತಿವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆಗಾಗ್ಗೆ ಕೇಳುತ್ತಾ ಇದ್ದಾರೆ. ಬಹಳ ದಿವಸಗಳಿಂದ ಕೇಳುತ್ತಾ ಇದ್ದಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಆಗಾಗ್ಗೆ ಕೇಳುತ್ತಿದ್ದರೆ ಅದು ಎಷ್ಟು ವರ್ಷದಿಂದ ಈಚೆನದು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದು ವರ್ಷದಿಂದ.

ಶ್ರೀ ಜಿ. ಎನ್. ಪುಟ್ಟಣ್ಣ.—Right Bank Channel Survey ಆಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇರುವ ಚಾನೆಲ್‌ಗೇ ನೀರು ಸಾಕಾಗುವುದಿಲ್ಲ ಎಂದು ಅನುಮಾನ ಬಂದಿದೆ. ಈಗ 1,241 ಎಕರೆ ಸಾಗುವಳಿಯಾಗುತ್ತಾ ಇದೆ. ಇನ್ನೂ 500 ಎಕರೆ ಜಾಸ್ತಿಯಾಗಬೇಕಾಗಿದೆ ಮ್ಯಾಗ್ಝಿಮಂ 1,700 ಎಕರೆಗೆ ನೀರು ಎಡನಾಲೆಯಿಂದ ಪೂರೈಸುವುದು ಆದಮೇಲೆ ಬಲಗಡೆ ನಾಲೆಯ ವಿಚಾರ ಮಾಡಲಾಗುವುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಆ ಅನುಮಾನ ಬಂದಿರುವುದು P.W.D. ಯವರಿಂದಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ಹುಟ್ಟುವುದಕ್ಕೆ ಮುಂಚೆಯೇ ಈ ಕೆರೆ ಕಟ್ಟಿಸಲಾಗಿದೆ. ಮೂರು ವರ್ಷ ಡಿಸ್‌ಚಾರ್ಜ್ ಆಗಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಮೇಲ್ಗಡೆ ಒಂದು ದೊಡ್ಡ ಹಳ್ಳ ಬರುವುದನ್ನು ಟರ್ನ್ ಮಾಡಿದರೆ ನೀರು ಸಾಕಾಗುವುದಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದು ಬೇರೆ ಪ್ರಶ್ನೆ. ಪರಿಶೀಲನೆ ಮಾಡುವುದಕ್ಕೆ ಅಂಥ ಸೂಚನೆ ಏನೂ ಬಂದಿಲ್ಲ.

Sri K. PUTTASWAMY.—May I know the extent of the catchment area ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ದೊಡ್ಡ ಪ್ರದೇಶವಾಗಿದೆ. ಕರಾರುವಾಕ್ಕಾಗಿ ಇಷ್ಟೇ ಎಂದು ಹೇಳಲು ಆಗುವುದಿಲ್ಲ.

Sri K. PUTTASWAMY.—What is the average number of units of water that is being impounded in the tank ?

Sri H. K. VEERANNA GOWDH.—I have not got those details here.

Sri C. K. RAJAIAH SETTY.—Is it a fact that the other tank which is to be constructed below this tank has a separate catchment area ?

Sri H. K. VEERANNA GOWDH.—That does not arise out of this question.

Sri K. S. SURYANARAYANA RAO.—Is there a proposal to build another tank at a lower level within ten miles of this reservoir ?

Sri H. K. VEERANNA GOWDH.—There is a project which is now almost complete known as the Gayatri Project and I am told that the discharge from this tank will be utilised for that tank.

Misappropriation in the Multi-Purpose Co-operative Society, Pandavapura Taluk.

Q.—2872. Sri B. CHAMIAH (Pandavapura).—

Will the Government be pleased to state:—

(*a*) whether it is a fact that some amount has been misappropriated in the Multi-purpose Co-operative Society, First Circle, Pandavapura taluk;

(*b*) if so, the amount so misappropriated?

A.—Sri S. NIJALINGAPPA (Chief Minister).—

(*a*) No misappropriation has been definitely established. Some amounts are however shown as recoverable from the office bearers and paid employees on account of shortage in stocks, purchase advances, during the year 1956-57. The matter is being further investigated.

(*b*) Does not arise in view of reply to clause (*a*).

ಶ್ರೀ ಬಿ. ಚಾಮಯ್ಯ.—ಈ ಸಂಘದ ಲೆಕ್ಕವನ್ನು ಯಾವಾಗ ಆಡಿಟ್ ಮಾಡಿಸಿದ್ದೀರಿ?

*ಶ್ರೀ ಎಸ್. ನಿಜಲಿಂಗಪ್ಪ.—1957-58ನೆಯ ಸಾಲಿನಲ್ಲಿ.

ಶ್ರೀ ಬಿ. ಚಾಮಯ್ಯ.—ಎಷ್ಟು ಹಣ ದುರುಪಯೋಗ ವಾಗಿದೆಯೆಂಬುದು ಕರಾರುವಾಕ್ಕಾಗಿ ಗೊತ್ತಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ದುರುಪಯೋಗ ವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಪರ್ಚೇಸ್ಸ್ ಅಡ್ವಾನ್ಸಸ್ ಕೊಟ್ಟಿದ್ದಾರೆ. ಅವನ್ನೂ, ಷಾರ್ಟೇಜಸ್ ಆಫ್ ಸ್ಟಾಕನ್ನೂ ಕೂಡಿದರೆ ಈ ಹಣ ವೆಷ್ಟೆಂಬುದು ಗೊತ್ತಾಗುತ್ತದೆ. ಕರಾರುವಾಕ್ಕಾಗಿ ಬೇಕಾದರೆ ಹೇಳುತ್ತೇನೆ. 1,780 ರೂಪಾಯಿ 92 ನಯೇ ಪೈಸೇ ಮತ್ತು 4,635 ರೂಪಾಯಿ 27 ನಯೇ ಪೈಸೆ ಸೇರಿ ಒಟ್ಟು ಆರು ಸಾವಿರ ಚಿಲ್ಲರೆ ಆಗುತ್ತದೆ.

ಶ್ರೀ ಬಿ. ಚಾಮಯ್ಯ.—ಹಣ ಸ್ವಲ್ಪ ಕಡಮೆಯಾಗಿದೆಯೆಂದು ಕಂಡು ಬಂದಿರುವುದು ದುರುಪಯೋಗ ವಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಕಾನೂನು ಪ್ರಕಾರ ಮಿಸ್ ಅಪ್ರೋಪ್ರಿಯೇಷನ್ ಆಗುವುದಿಲ್ಲ. ಅಲ್ಲಿ ಕೆಲವು ಪರ್ಚೇಸ್ ಅಡ್ವಾನ್ಸಸ್ ಎಂದು ಕೊಟ್ಟಿದೆ. ಷಾರ್ಟೇಜ್ ಆಫ್ ಸ್ಟಾಕ್ ಎಷ್ಟೆಂಬುದು ಆಡಿಟ್ ಮಾಡಿದರೆ ಗೊತ್ತಾಗುತ್ತದೆ. ಕೇಸು ಹಾಕುವುದಕ್ಕೆ ಸಾಧ್ಯವೇ ಎಂಬುದನ್ನು ವಿಚಾರ ಮಾಡುತ್ತಿದ್ದಾರೆ. ಈಗ 346 ರೂಪಾಯಿ 19ನಯೇ ಪೈಸೇ ರಿಕವರ್ ಆಗಿದೆ, ಬಾಕಿಯಾದ್ದು ರಿಕವರ್ ಆಗಬೇಕು.

Sri H. V. KOUJALGI.—Sir, is it the opinion of the Government that purchase advance held by an employee does not amount to temporary misappropriation?

Sri S. NIJALINGAPPA.—It relates to the facts of each case. You will have to judge by the circumstances.

ಶ್ರೀ ಬಿ. ಚಾಮಯ್ಯ.—ಅಲ್ಲಿ ಸೆಕ್ರೆಟರಿ ಆಗಿದ್ದವರು ಸುಮಾರು ಮೂರು ಸಾವಿರ ರೂಪಾಯಿಗಳವರೆಗೆ ದುರುಪಯೋಗ ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಸೆಕ್ರೆಟರಿಯವರಿಂದ 2,431 ರೂಪಾಯಿ 35ನಯೇ ಪೈಸೆ ಬರಬೇಕು.

ಶ್ರೀ ಬಿ. ಚಾಮಯ್ಯ.—ಅದು ಸರಿಯಾಗಿ ರುಜುವಾತಾದರೆ ಅವರ ಮೇಲೆ ಪ್ರಾಸಿಕ್ಯೂಷನ್ ಕ್ರಮ ಜರುಗಿಸುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆ ಮಾಡಿದ ನಂತರ ಮುಂದಿನ ಕ್ರಮ ಏನು ಕೈಕೊಳ್ಳಬೇಕೆಂಬುದನ್ನು ಸೂಚನೆ ಮಾಡಿದ್ದೀರಿ. ಅದನ್ನು ಗಮನಿಸಲಾಗುತ್ತದೆ.

ಶ್ರೀ ಜಿ. ಎಸ್. ಪುಟ್ಟಣ್ಣಿ.—18ನೇ ಡಿಸೆಂಬರ್ 1957ರಲ್ಲಿ ಪ್ರಶ್ನೆ ಹಾಕಿದ್ದಕ್ಕೆ 3ನೇ ಏಪ್ರಿಲ್ 1958 ರಲ್ಲಿ "The matter is being further investigated." ಎಂದು ಉತ್ತರ ಕೊಟ್ಟಿದೆ. ಇಷ್ಟು ದಿವಸ ನಿಧಾನ ಮಾಡಿದರೆ it will be failure of justice, ಅಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಪುಟ್ಟಣ್ಣನವರು ಈ ಪ್ರಶ್ನೆ ಕೇಳುವುದು ಆಶ್ಚರ್ಯಕರ. ಹಳೆಯ ಲೆಕ್ಕ ಹುಡುಕಬೇಕು. ಕೆಲವು ದಾಖಲೆ ಇಲ್ಲ. ಇದೆಲ್ಲಾ ಸುಲಭವಾಗಿ ಸಿಕ್ಕುವ ಹಾಗೆ ಮಾಡಿರುವುದಿಲ್ಲ ವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ಜಿ. ಎಸ್. ಪುಟ್ಟಣ್ಣಿ.—ಇಂಥ ತಪ್ಪು ಮಾಡುವವರನ್ನೇಕೆ ತಕ್ಷಣ ನಸ್ಪೆಂಡ್ ಮಾಡಬಾರದು?

Sri S. NIJALINGAPPA.—That again is a suggestion for action.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇಂಥ ಸಂದರ್ಭಗಳಲ್ಲಿ ಮಿಸಪ್ರೋಪ್ರಿಯೇಷನ್ ಆದ ಹಣದಲ್ಲಿ ಒಂದಂಶ ಹಿಂದಕ್ಕೆ ಬಂದರೆ ಅದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮ ನಡೆಸಕೂಡದೆಂಬ ಒಂದು ತತ್ವ ಜಾರಿಗೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಪ್ರತಿಪಾದನೆ ಮಾಡುವುದೂ ಇಲ್ಲ, ಅಂಥ ತತ್ವವನ್ನು ಜಾರಿಗೆ ತರುವುದೂ ಇಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಭಾಗಾಂಶವನ್ನೂ ಲಾದರೂ ಕೂಡ ಸೂಕ್ತ ಕ್ರಮ ನಡೆಸುವುದು ಆವಶ್ಯಕವಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ತಮ್ಮ ಸೂಚನೆ ಗಮನಿಸಲಾಗಿದೆ.